


# ಪ್ರಿಯೆ ನೋಡೆ, ಪ್ರೇಮದ ಗೋಡೆ!



ಪ್ರಣಯಿಗಳ ಸ್ವರ್ಗವೆನಿಸಿರುವ ಪ್ಯಾರಿಸ್‌ನ ಮಾಂಟ್ಮಾರ್ಟ್ರೆಯ ಜೇಹಾನ್ ರಿಕ್ಟಸ್ ಗಾರ್ಡನ್ ಚೌಕದಲ್ಲಿ ಗೋಡೆಯೊಂದಿದೆ. ಇದು ಮಣ್ಣು, ಮರಳು, ಇಟ್ಟಿಗೆಯ ಅಥವಾ ಸುಣ್ಣ ಬಳಿದ ಮಾಮೂಲಿ ಗೋಡೆ ಎಂದುಕೊಂಡಿರಾ? ಹಾಗೆಂದರೆ ನಿಮ್ಮ ಊಹೆ ತಪ್ಪು. 'ನಾ ನಿನ್ನ ಪ್ರೀತಿಸುವೆ' (ಐ ಲವ್ ಯೂ) ಎಂದು ಬರಹದಲ್ಲಿ ಸಾರಿ ಸಾರಿ ಹೇಳುತ್ತಿರುವ ಪ್ರೇಮದ ಗೋಡೆ (ವಾಲ್ ಆಫ್ ಲವ್).

ಈ ಗೋಡೆಯು 40 ಚದರ ಮೀಟರ್ ನಷ್ಟು ದೊಡ್ಡದಿದ್ದು, ಎನಾಮೆಲ್ ಮಾಡಿದ 612 ಟೈಲ್ಸ್ ಗಳನ್ನು ಹೊಂದಿದೆ. ಪ್ರೀತಿಯನ್ನು ಅಭಿವ್ಯಕ್ತಗೊಳಿಸಲು ಹೇಳುವ 'ಐ ಲವ್ ಯೂ' ಎನ್ನುವ ವಾಕ್ಯವನ್ನು ಗೋಡೆಯ ಮೇಲೆ ಒಂದು ಸಾವಿರಕ್ಕೂ ಹೆಚ್ಚು ಬಾರಿ ಬರೆಯಲಾಗಿದೆ, ಅದೂ 300 ಕ್ಕೂ ಹೆಚ್ಚಿನ ಬೇರೆ ಬೇರೆ ಭಾಷೆಯಲ್ಲಿ!

ಫ್ರೆಡೆರಿಕ್ ಬಾರನ್ ಹಾಗೂ ಕ್ಲೈರ್ ಕಿಟೊ ಎಂಬ ಇಬ್ಬರು ಕಲಾವಿದರು ಈ ಗೋಡೆಯನ್ನು ರಚಿಸಿದ್ದಾರೆ. ಪ್ರೀತಿಯ ಅನುಭೂತಿಯನ್ನು ಮುಕ್ತವಾಗಿ ವ್ಯಕ್ತಪಡಿಸುವ ಉಕ್ತಿಗಳನ್ನೆಲ್ಲಾ ಭಿತ್ತಿ ಚಿತ್ರ ಕಲಾವಿದ ಫ್ರೆಡೆರಿಕ್ ಬಾರನ್ನು ಹಲವಾರು ದೇಶದ ರಾಯಭಾರಿಗಳ ಹಾಗೂ ಅಕ್ಕಪಕ್ಕದಲ್ಲಿರುವ ಮನೆಗಳ ಕದ ತಟ್ಟಿ ಕೇಳಿ ಕೇಳಿ ತನ್ನ ನೋಟ್ ಬುಕ್ಕಿನಲ್ಲಿ ಬರೆದುಕೊಂಡು ಸಂಗ್ರಹಿಸಿದನಂತೆ ಹಾಗೂ ಓರಿಯಂಟಲ್ ಕ್ಯಾಲಿಗ್ರಫಿಯನ್ನು ಅಭ್ಯಾಸ ಮಾಡುತ್ತಿರುವ ಕ್ಲೈರ್ ಕಿಟೊಗೆ ಇದನ್ನೆಲ್ಲಾ ಒಂದಾಗಿಸಲು ಹೇಳಿದನಂತೆ. ಇವರಿಬ್ಬರೂ ಜೊತೆಗೂಡಿ ಕೆಲಸ ಮಾಡಿದ್ದರಿಂದಲೇ, ಪ್ರಮುಖ ಭಾಷೆಗಳೊಂದಿಗೆ ಆಡು ಭಾಷೆಯೂ ಇರುವ ಗೋಡೆಯ ಚಿತ್ರವು ಈ ಭೂಮಿಯಲ್ಲಿ ಮೂಡಿದೆ ,ಆಕಾಶದಲ್ಲಿ ನಕ್ಷತ್ರವು ಮಿನುಗುವ ಹಾಗೆ ಮಿನುಗುತ್ತಿದೆ.

ಫ್ರೆಡೆರಿಕ್ ಬಾರನ್ನು ಗೋಡೆಯ ಬಗ್ಗೆ ಅಲ್ಲಲ್ಲಿ ಕಾಣಬರುವ ಕೆಂಪು ಬಣ್ಣವು ಆಗಾಗ್ಗೆ ಹರಿದು ಛಿದ್ರವಾಗುವ ಮಾನವತೆಯ ಹೃದಯವನ್ನು ಪ್ರತಿನಿಧಿಸುತ್ತದೆ ಅದನ್ನು ಈ ಗೋಡೆಯು ಒಂದಾಗಿರಿಸಲು ಪ್ರಯತ್ನಿಸುತ್ತದೆ ಎಂದು ಪ್ರೀತಿಯಿಂದ ಹೇಳಿದ್ದಾನೆ.

ಪ್ಯಾರಿಸ್ ನೋಡಲು ಆಗಮಿಸುವ ದೇಶ ವಿದೇಶದ ಪ್ರವಾಸಿಗರು ಈ ಗೋಡೆಯನ್ನು ತಮ್ಮ ಕ್ಯಾಮರಾದಲ್ಲಿ ಸೆರೆಹಿಡಿದುಕೊಳ್ಳದೇ ಹೋಗುವುದಿಲ್ಲ ಹಾಗೆಯೇ ಪ್ರೇಮಿಗಳೂ ಸಹ ಇಲ್ಲಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳದೆ ಮುಂದಡಿಯಿಡುವುದಿಲ್ಲ!

■ ವಿದ್ಯಾ ವಿ. ಹಾಲಭಾವಿ